## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಬಿ.ಜಿ.ಪಾಟೀಲ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 135

ಉತ್ತರಿಸಬೇಕಾದ ದಿನಾಂಕ : 13-09-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ವಿತರಿಸುವ ಸಾಲಕ್ಕೆ ವಿಧಿಸುತ್ತಿರುವ ಬಡ್ಡಿಯ ದರವೆಷ್ಟು; (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ರೂ.3.00 ಲಕ್ಷದವರೆಗೆ ಅಲ್ಪಾವಧಿ ಬೆಳೆ ಸಾಲ ನೀಡುತ್ತಿದ್ದು ಇದಕ್ಕೆ ಶೂನ್ಯ ಬಡ್ಡಿದರ ಮತ್ತು ರೂ.10.00 ಲಕ್ಷದವರೆಗೆ ಮಧ್ಯಮಾವಧಿ ಸಾಲ ನೀಡುತ್ತಿದ್ದು ಇದಕ್ಕೆ ಶೇ.3% ಬಡ್ಡಿ ದರ ಅನ್ವಯವಾಗುತ್ತದೆ.<br>ಈ ದರವು ರೈತರು ನಿಗಧಿತ ಅವಧಿ ಅಂದರೆ ಗಡುವು ದಿನಾಂಕದೊಳಗೆ ಮರುಪಾವತಿಸಿದಲ್ಲಿ ಮಾತ್ರ ಅನ್ವಯವಾಗುತ್ತದೆ. ರೈತರು ಗಡುವು ದಿನಾಂಕವಾದ ನಂತರ ಮರುಪಾವತಿಸಿದಲ್ಲಿ ಶೇ.11.75% ಬಡ್ಡಿ ದರ ಅನ್ವಯವಾಗುತ್ತದೆ. |
| ಆ) | ಮೇಲ್ಕಂಡ ಜಿಲ್ಲೆಗಳಲ್ಲಿ ರೈತರಿಗೆ ಕಿಸಾನ್ ಕ್ರೆಡಿಟ್ ಸಾಲದ ಮುಖಾಂತರ ನೀಡಿರುವ ಸಾಲಕ್ಕೆ ವಿಧಿಸುವ ಬಡ್ಡಿ ಎಷ್ಟು; (ವಿವರ ನೀಡುವುದು) | ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ ಪಡೆದ 12 ತಿಂಗಳೊಳಗಾಗಿ ಸಾಲ ಮರುಪಾವತಿಸಿದಲ್ಲಿ ಶೂನ್ಯ ಬಡ್ಡಿದರ ವಿಧಿಸಲಾಗುತ್ತಿದೆ. 12 ತಿಂಗಳ ನಂತರ ಮರುಪಾವತಿಸಿದಲ್ಲಿ ಸಾಲ ಪಡೆದ ದಿನಾಂಕದಿಂದ ಶೇ.11.75% ಬಡ್ಡಿ ದರ ವಿಧಿಸಲಾಗುತ್ತಿದೆ. |
| ಇ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ರೈತರಿಗೆ ಅಕ್ರಮವಾಗಿ ಹೆಚ್ಚುವರಿ ಬಡ್ಡಿ ವಿಧಿಸಿ ಸಾಲ ವಸೂಲಾತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ರೈತರಿಗೆ ಅಕ್ರಮವಾಗಿ ಬಡ್ಡಿ ವಿಧಿಸಿರುವುದಿಲ್ಲ. 2021-22ನೇ ಸಾಲಿನಲ್ಲಿ ಗಡುವು ದಿನಾಂಕ ಮೀರಿದ 65,966 ರೈತರಿಂದ ಶೇ.11.75% ರ ಬಡ್ಡಿ ದರದಲ್ಲಿ ರೂ.21.67 ಕೋಟಿಗಳ ಬಡ್ಡಿ ವಸೂಲು ಮಾಡಿದ್ದು, ವಿವರ ಕೆಳಕಂಡಂತಿದೆ.<br>(ರೂ.ಲಕ್ಷಗಳಲ್ಲಿ) |

| ಶೂನ್ಯ ಬಡ್ಡಿದರದಲ್ಲಿ ಸಾಲ ವಸೂಲಾತಿ | | ಅವಧಿ ಮೀರಿದ ಸಾಲಗಳಿಗೆ ಹೆಚ್ಚಿನ ಬಡ್ಡಿ ದರದಲ್ಲಿ ವಸೂಲಾತಿ | | |
|---|---|---|---|---|
| ಸಂಖ್ಯೆ | ಮೊತ್ತ ಅಸಲು | ಸಂಖ್ಯೆ | ಅಸಲು | ಬಡ್ಡಿ |
| 82,061 | 43,981.02 | 65,966 | 19,247.95 | 2167.74 |

ಸಂಖ್ಯೆ: ಸಿಒ 311 ಸಿಎಲ್‌ಎಸ್ 2022

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು